**<u>ದಿನಾಂಕಃ 24.07.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.</u>**

<u>ಪಾಟೀ ಸವಾಲು ವಾದಿ ಪರ ಶ್ರೀ. ಹೆಚ್ ಎಸ್ ಹೆಚ್ ವಕೀಲರಿಂದಃ-</u>

ನಾನು 12 ನೇ ತರಗತಿಯವರೆಗೆ ಓದಿರುತ್ತೇನೆ. ನನಗೆ ಕನ್ನಡ ಮತ್ತು ಇಂಗ್ಲೀಷ್ ಓದಲು ಬರೆಯಲು ಬರುತ್ತದೆ. 1 ನೇ ಪ್ರತಿವಾದಿ ನನ್ನ ತಂದೆ ಎಂದರೆ ಸರಿ. ಪ್ರತಿವಾದಿ 3 ಮತ್ತು 4 ನನ್ನ ಸಹೋದರರು ಎಂದರೆ ಸರಿ. ನಾನು ಇನ್ನುಳಿದ ಪ್ರತಿವಾದಿಯರ ಪರವಾಗಿಯೂ ಸಹ ಸಾಕ್ಷ್ಯ ನುಡಿಯುತ್ತಿದ್ದೇನೆ. ವಾದಿಯು ಏನು ಪರಿಹಾರ ಕೇಳಿ ದಾವೆ ಮಾಡಿರುತ್ತಾರೆ ಎಂದು ತಿಳಿದುಕೊಂಡಿದ್ದೇನೆ. ಪ್ರತಿವಾದ ಪತ್ರದಲ್ಲಿರುವ ಅಂಶಗಳನ್ನು ನಾನು ಓದಿ ತಿಳಿದುಕೊಂಡಿರುತ್ತೇನೆ. ವಾದಿಯು ಈ ದಾವೆ ಹೂಡುವ ಪೂರ್ವದಲ್ಲಿ ವಕೀಲರ ಮೂಲಕ ನನಗೆ ತಿಳುವಳಿಕೆ ನೋಟೀಸು ಕೊಡಿಸಿದ್ದರು ಎಂದರೆ ಸರಿ. ನಾನೂ ಸಹ ನನ್ನ ವಕೀಲರ ಮೂಲಕ ಪ್ರತ್ಯುತ್ತರ ನೋಟೀಸು ಕೊಡಿಸಿರುತ್ತೇನೆ ಎಂದರೆ ಸರಿ. ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲಿನ ಅಂಶಗಳನ್ನು ನಾನು ಓದಿ ತಿಳಿದುಕೊಂಡಿದ್ದೇನೆ. 3 ನೇ ಪ್ರತಿವಾದಿ ಎಂಕಾಂ ಓದಿರುತ್ತಾರೆ. 4 ನೇ ಪ್ರತಿವಾದಿ ಐಟಿಐ ಓದಿರುತ್ತಾರೆ. ನಿಪಿ 1 ಕ್ರಯದ ಕರಾರು ಪತ್ರದಲ್ಲಿ ನಾನು ಮತ್ತು ನನ್ನ ಸಹೋದರರಾದ ಪ್ರತಿವಾದಿ 3 ಮತ್ತು 4, ನನ್ನ ತಂದೆ 1 ನೇ ಪ್ರತಿವಾದಿ ಸಹಿ ಮಾಡಿರುತ್ತೇವೆ ಎಂದರೆ ಸರಿ. ಕ್ರಯದ ಕರಾರು ಪತ್ರದ ಎಲ್ಲಾ ಪುಟಗಳಲ್ಲಿ ನಾವುಗಳು ಸಹಿ ಮಾಡಿರುತ್ತೇವೆಂದರೆ ಸರಿ.

ಕ್ರಯದ ಕರಾರು ಪತ್ರವನ್ನು ವಾದಿಯ ಮಗ ತ್ಯಾಗೇಶ್ ತಯಾರು ಮಾಡಿಸಿಕೊಂಡು ಬಂದಿರುತ್ತಾರೆ ಎಂದು ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲಿ ಹೇಳಿದ್ದು ಸದರಿ ವಿಚಾರವನ್ನು ತಮ್ಮ ಮರು ಉತ್ತರ ನೋಟಿಸಿನಲ್ಲಾಗಲೀ ಅಥವಾ ಪ್ರತಿವಾದ ಪತ್ರದಲ್ಲಾಗಲೀ ಹೇಳಿದ್ದೀರಾ ಎಂದರೆ ಸಾಕ್ಷಿ ಇಲ್ಲ ಎನ್ನುತ್ತಾರೆ. ನಿಡಿ 1 ಬೋಗ್ಯದ ಕರಾರು ಪತ್ರವನ್ನು ತಯಾರು ಮಾಡಲು ಮೊದಲನೇ ಪಕ್ಷಗಾರಾರಾಗಿ ನನ್ನ ತಂದೆ ಮರೀಗೌಡ

ಎಂದು ನಮೂದಾಗಿದ್ದು , 2ನೇ ಪಕ್ಷಗಾರರ ಕಲಂನಲ್ಲಿ ನಮೂದಾಗಿಲ್ಲ ಎಂದರೆ ಸರಿ. ಬೋಗ್ಯ ಕರಾರು ಪತ್ರ ತಯಾರು ಮಾಡಬೇಕಾದರೆ ಮೊದಲನೇ ಪಕ್ಷಗಾರರು ಮತ್ತು ಎರಡನೇ ಪಕ್ಷಗಾರರು ಎಂಬ ಇಬ್ಬರು ವ್ಯಕ್ತಿಗಳ ನಡುವೆ ಕರಾರು ಆಗಬೇಕು ಎಂದರೆ ಸರಿ. ನಿಡಿ 1 ಬೋಗ್ಯ ಕರಾರುಪತ್ರದಲ್ಲಿ ನಮ್ಮ ತಂದೆಯ ಹೆಬ್ಬೆಟ್ಟಿನ ಸಹಿ ಮಾತ್ರ ಇರುತ್ತದೆ ಎಂದರೆ ಸರಿ. ಬೋಗ್ಯ ಕರಾರುಪತ್ರದಲ್ಲಿ ಬೋಗ್ಯಕ್ಕೆ ಪಡೆಯುವವರ ಹೆಸರೇ ಇಲ್ಲ ಎಂದರೆ ಸಾಕ್ಷಿಯು ಬೋಗ್ಯಪತ್ರವೇ ನಮ್ಮದಲ್ಲ ಎನ್ನುತ್ತಾರೆ. ಸರ್ವೆ ನಂ.309/1 ವಿಸ್ತೀರ್ಣ 9 ಗುಂಟೆ ಜಮೀನನ್ನು ಬೋಗ್ಯಕ್ಕೆ ಕೊಟ್ಟಿದ್ದೆವು ಎಂದು ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲಿ ಮತ್ತು ಪ್ರತಿವಾದ ಪತ್ರದಲ್ಲಿ ಬರೆದಿರುವ ಅಂಶಗಳು ಸುಳ್ಳು ಎಂದರೆ ಸರಿಯಲ್ಲ. ದಾವಾ ಆಸ್ತಿಯನ್ನು ವಾದಿಗೆ ಕ್ರಯದ ಕರಾರು ಪತ್ರ ಮಾಡಿಕೊಟ್ಟಿರುವುದು ಸತ್ಯ ಎಂದರೆ ಸರಿಯಲ್ಲ. ದಾವಾ ಆಸ್ತಿಯನ್ನು ವಾದಿಗೆ ಮಾರಾಟ ಮಾಡುವ ಸಲುವಾಗಿ ಕ್ರಯದ ಕರಾರು ಪತ್ರ ಮಾಡಿಸಿಕೊಂಡಿದ್ದು ಈಗ ಹೇಗಾದರೂ ಮಾಡಿ ದಾವಾ ಆಸ್ತಿಯನ್ನು ನಮ್ಮ ಬಳಿ ಉಳಿಸಿಕೊಳ್ಳಬೇಕೆಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಸರ್ವೆ ನಂ.309/1 ವಿಸ್ತೀರ್ಣ 9 ಗುಂಟೆ ಜಮೀನನ್ನು ವಾದಿಗೆ ಮಾರಾಟ ಮಾಡುವವರಿದ್ದರೆ ಸದರಿ ಸರ್ವೆ ನಂಬರ್ ಮತ್ತು ವಿಸ್ತೀರ್ಣವನ್ನು ಕ್ರಯದ ಕರಾರಪತ್ರದಲ್ಲಿ ನಮೂದು ಮಾಡುತ್ತಿದ್ದೆ ಎಂದರೆ ಸಾಕ್ಷಿಯು ಕ್ರಯದ ಕರಾರು ಪತ್ರವನ್ನು ನಾನು ಓದಿಲ್ಲ ಎನ್ನುತ್ತಾರೆ. ದಾವಾ ಆಸ್ತಿಗೆ ಚೆಕ್ಕು ಬಂದಿಯನ್ನು ಪ್ರತಿವಾದಿಗಳಾದ ನಾವೇ ಹೇಳಿ ಬರೆಸಿರುವುದು ಎಂದರೆ ಸರಿಯಲ್ಲ. ವಾದಿಯಿಂದ ರೂ. 2 ಲಕ್ಷ ಹಣವನ್ನು ದಾವಾ ಆಸ್ತಿಯನ್ನು ಖರೀದಿ ಮಾಡುವ ಸಲುವಾಗಿ ಪಡೆದಿದ್ದುಈಗ ಸದರಿ ಆಸ್ತಿಯನ್ನು ನಮ್ಮ ಬಳಿಯೇ ಉಳಿಸಿಕೊಳ್ಳಲು ಈಗ ಸುಳ್ಳು ಕಾರಣ ಹೇಳುತ್ತಾ ಸುಳ್ಳು ಪ್ರತಿವಾದ ಪತ್ರ ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ವಾದಿಯು ಇನ್ನುಳಿಕೆ ರೂ.10 ಸಾವಿರ ಹಣವನ್ನು ಕೊಟ್ಟು ಕ್ರಯಪತ್ರ ಮಾಡಿಸಿಕೊಳ್ಳಲು ಸಿದ್ದರಿದ್ದಾರೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಃ ಇಲ್ಲ**

(ತೆರದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕರಣ ಮಾಡಲಾಯಿತು.)

ಓ. ಹೇ. ಕೇ. ಸರಿ ಇದೆ.

ಅಪರ ಸಿವಿಲ್ ನ್ಯಾಯಾಧೀಶರು ಹಾಗೂ ಜೆಎಂಎಫ್‌ಸಿ
ನ್ಯಾಯಾಲಯ, ಚನ್ನಪಟ್ಟಣ